# ಕರ್ನಾಟಕ ವಿಧಾನಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 205 |
| ಸದಸ್ಯರ ಹೆಸರು | ಶ್ರೀ ಕೆ.ಪ್ರತಾಪ್ ಸಿಂಹ ನಾಯಕ್ |
| ಉತ್ತರಿಸುವ ದಿನಾಂಕ | 06/12/2023 |
| ಉತ್ತರಿಸುವವರು | ಸಾರಿಗೆ ಮತ್ತು ಮುಜರಾಯಿ ಸಚಿವರು |

| ಪ್ರಶ್ನೆ | | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಹಿಂದೂ ಧಾರ್ಮಿಕ ಹಾಗೂ ಧರ್ಮಾದಾಯ ದತ್ತಿ ಇಲಾಖೆ ವ್ಯಾಪ್ತಿಯಲ್ಲಿ ನೋಂದಾಯಿತ ದೇವಸ್ಥಾನಗಳ ಪೈಕಿ 'ಸಿ' ಗ್ರೇಡ್‌ನ ಬಹಳಷ್ಟು ದೇವಾಲಯಗಳ ಆಸ್ತಿಗಳು ಒತ್ತುವರಿ ಮತ್ತು ಅತಿಕ್ರಮಣದ ಕಾರಣಗಳಿಂದಾಗಿ ಪರರ ಪಾಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ರಾಜ್ಯದ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿ ಇಲಾಖೆ ವ್ಯಾಪ್ತಿಯಲ್ಲಿ ನ ಬಹುತೇಕ ಅಧಿಸೂಚಿತ ದೇವಸ್ಥಾನ/ ಸಂಸ್ಥೆಗಳ ಆಸ್ತಿಗಳು ಒತ್ತುವರಿ ಮತ್ತು ಅತಿಕ್ರಮಣದ ಕಾರಣಗಳಿಂದಾಗಿ ಪರರ ಪಾಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. |
| ಆ) | ಬಂದಿದ್ದಲ್ಲಿ, ಸದರಿ ಆಸ್ತಿಗಳ ರಕ್ಷಣೆ ಹಾಗೂ ನೋಂದಣಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; | • ಸರ್ಕಾರದ ಆದೇಶ ಸಂಖ್ಯೆ ಕಂಇ 23 ಮುಸೇವಿ 2020 ದಿನಾಂಕ:18-06-2020ರ ಆದೇಶದಲ್ಲಿ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997ರ ಕಲಂ 5ರನ್ವಯ ಕಂದಾಯ ಇಲಾಖೆಯ ಗ್ರಾಮಲೆಕ್ಕಿಗರು/ಕಂದಾಯ ನಿರೀಕ್ಷಕರು/ನಾಡ ಕಚೇರಿಯ ಉಪ ತಹಶೀಲ್ದಾರ್ ಗಳಿಗೆ ಸಂಬಂಧಪಟ್ಟ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಪ್ರವರ್ಗ "ಸಿ" ಮುಜರಾಯಿ ದೇವಾಲಯಗಳ (ವಾರ್ಷಿಕವಾಗಿ ರೂ.5.00 ಲಕ್ಷಗಳಿಗೂ ಕಡಿಮೆ ಆದಾಯ) ಚರ ಸ್ಥಿರಾಸ್ತಿ ಮತ್ತು ಲೆಕ್ಕ ಪತ್ರಗಳ ನಿರ್ವಹಣೆಯನ್ನು ನಿರ್ವಹಿಸುವಂತೆ ಆದೇಶಿಸಲಾಗಿರುತ್ತದೆ. |

| | | |
|---|---|---|
| | | • ರಾಜ್ಯದ ಮುಜರಾಯಿ ಇಲಾಖೆಯ ವ್ಯಾಪ್ತಿಗೆ ಒಳಪಡುವ ಆಸ್ತಿಗಳ ವಾಸ್ತವಿಕ ಪರಿಸ್ಥಿತಿ ಸಮೀಕ್ಷೆ ಮತ್ತು ಸಮರ್ಪಕ ಉಪಯೋಗ ಹಾಗೂ ಜಮೀನುಗಳ ರಕ್ಷಣೆಗೆ ಆಯಾಯ ಜಿಲ್ಲೆಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ: ಕಂಇ 69 ಮುಅಬಿ 2008, ದಿನಾಂಕ: 16-09-2008 ರಲ್ಲಿ ಸಮಿತಿಯನ್ನು ರಚಿಸಲಾಗಿದೆ. ಅದರಂತೆ ಇಲಾಖಾ ಅಧೀನಕ್ಕೆ ಒಳಪಡುವ ಆಸ್ತಿಗಳಲ್ಲಿನ ಒತ್ತುವರಿಗಳನ್ನು ತೆರವುಗೊಳಿಸಲು ಹಾಗೂ ಸಂರಕ್ಷಣೆ ಕಾರ್ಯಕೈಗೊಳ್ಳಲು ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. ಸ್ವತ್ತುಗಳಲ್ಲಿನ ಅನಧಿಕೃತ ಒತ್ತುವರಿದಾರರನ್ನು ಹೊರಹಾಕಲು ಧಾರ್ಮಿಕ ದತ್ತಿ ಇಲಾಖೆಯ ಕಾಯ್ದೆ ಮತ್ತು ನಿಯಮಗಳು ಮತ್ತು ಇತರೆ ಕಾಯ್ದೆಯಡಿಯಲ್ಲಿ ಕ್ರಮವಹಿಸಲಾಗುತ್ತಿದೆ.<br>• ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರಿಂದ ದಿನಾಂಕ:17-11-2020 ರ ಪತ್ರದಲ್ಲಿ ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ ಇವರಿಗೆ, ಎಲ್ಲಾ ಭೂದಾಖಲೆಗಳ ಉಪನಿರ್ದೇಶಕರಿಗೆ ಅವರ ಕಾರ್ಯವ್ಯಾಪ್ತಿಯ ಜಿಲ್ಲೆಯಲ್ಲಿನ ವಿವಿಧ ತಾಲ್ಲೂಕುಗಳಲ್ಲಿನ ಮುಜರಾಯಿ ಆಸ್ತಿಗಳನ್ನು ಅಳತೆಗೆ ಒಳಪಡಿಸಿ ದಾಖಲೆಗಳನ್ನು ಸಿದ್ಧಪಡಿಸಿ ಪ್ರತಿ ತಾಲ್ಲೂಕಿನ ಕನಿಷ್ಟ 05 ಆಸ್ತಿ ದಾಖಲೆಗಳನ್ನು ಪ್ರತಿ ಮಾಹೆ ಆದ್ಯತೆ ಮೇರೆಗೆ ಸರ್ವೆ ಕಾರ್ಯ ನಡೆಸಲು ಕ್ರಮ ಜರುಗಿಸಲು ಕೋರಲಾಗಿರುತ್ತದೆ.<br>• ಈ ಕುರಿತು ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ನಿರ್ದೇಶನದನ್ವಯ ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರ ದಿನಾಂಕ:11-12-2020ರ ಪತ್ರದಲ್ಲಿ, ಎಲ್ಲಾ ಜಿಲ್ಲಾಧಿಕಾರಿಗಳು/ ಸಂಬಂಧಪಟ್ಟ ಅಧಿಕಾರಿಗಳಿಗೆ ಧಾರ್ಮಿಕ ಸಂಸ್ಥೆಗಳ ಆಸ್ತಿಗಳ ದಾಖಲೆಗಳನ್ನು ನವೀಕರಿಸಿಕೊಂಡು ನಿರ್ವಹಿಸುವ ಕುರಿತು ಕಾರ್ಯ ಪ್ರವೃತ್ತರಾಗಲು ತಿಳಿಸಲಾಗಿರುತ್ತದೆ. |

| | | |
|---|---|---|
| | | • ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿರುವ ದೇವಾಲಯಗಳ/ಛತ್ರಗಳ ಜಮೀನು ಹಾಗೂ ಇತರೆ ಆಸ್ತಿಗಳನ್ನು ಆದ್ಯತೆ ಮೇರೆಗೆ ಅಳತೆ ಮಾಡಿ ನಕ್ಷೆ ತಯಾರಿಸಲು ಸಹಾಯಕ ದತ್ತಿ ಸಮೀಕ್ಷಾಧಿಕಾರಿಗಳಾಗಿರುವ ಭೂದಾಖಲೆಗಳ ಉಪ ನಿರ್ದೇಶಕರಿಗೆ ಸೂಚಿಸುವಂತೆ ಹಾಗೂ ಕನಿಷ್ಠ ತಿಂಗಳಿಗೆ ಒಂದು ತಾಲ್ಲೂಕಿನಲ್ಲಿ 5 ದೇವಾಲಯಗಳ ದಾಖಲೀಕರಣ ಮಾಡಿ ವರದಿಯನ್ನು ಮಾಸಿಕ ಪ್ರಗತಿ ತ:ಖ್ತೆಯಲ್ಲಿ ಆಯುಕ್ತರು ಧಾರ್ಮಿಕ ದತ್ತಿ ಇಲಾಖೆ ಇವರಿಗೆ ಕಡ್ಡಾಯವಾಗಿ ಸಲ್ಲಿಸುವಂತೆ ಜಿಲ್ಲೆಯ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು, ಅ.ಸ. ಪತ್ರ ಸಂ: 1265/2020, ದಿನಾಂಕ:11.12.2020ರ ಪತ್ರದಲ್ಲಿ ಸೂಚನೆಯನ್ನು ನೀಡಿರುತ್ತಾರೆ.<br>• ಅಧಿಸೂಚಿತ ದೇವಸ್ಥಾನಕ್ಕೆ ಸೇರಿದ ಸ್ಥಿರ ಸ್ವತ್ತುಗಳ ನಿರ್ವಹಣೆ ಸಂಬಂಧ ಪಾರದರ್ಶಕತೆಯನ್ನು ಕಾಯ್ದುಕೊಳ್ಳುವ ಉದ್ದೇಶದಿಂದ ಇಲಾಖೆಯಲ್ಲಿ ಕೇಂದ್ರ ಸರ್ಕಾರದ ಎನ್.ಐ.ಸಿ.ಯ ಮೂಲಕ ಆನ್‌ಲೈನ್ ತಂತ್ರಾಂಶ (Integrated Temple Management System/ ITMS) ವನ್ನು ಜಾರಿಗೆ ತರಲಾಗಿದೆ. ಸದರಿ ತಂತ್ರಾಂಶದಲ್ಲಿ ಹಂತ-ಹಂತವಾಗಿ ದೇವಾಲಯಗಳ ಸ್ಥಿರಾಸ್ತಿ ಮತ್ತು ಚರಾಸ್ತಿಗಳ ಮಾಹಿತಿ ಮತ್ತು ಅವುಗಳ ನಿರ್ವಹಣೆಗೆ ಸಂಬಂಧಿಸಿದಂತೆ ಮಾಡ್ಯೂಲ್‌ಗಳನ್ನು ಅಭಿವೃದ್ಧಿಪಡಿಸಿ ಜಾರಿಗೆ ತರಲು ಕ್ರಮ ಕೈಗೊಳ್ಳಲಾಗುತ್ತಿದೆ.<br>• ಅಧಿಸೂಚಿತ ದೇವಸ್ಥಾನದ ಜಾಗಗಳಲ್ಲಿನ ಒತ್ತುವರಿದಾರರು/ ಅನಧಿಕೃತದಾರರನ್ನು ತೆರವುಗೊಳಿಸಲು ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತಿದೆ. ಈಗಾಗಲೇ ಮಾನ್ಯ ಉಚ್ಛನ್ಯಾಯಾಲಯ ಮತ್ತು ಸಿವಿಲ್ ನ್ಯಾಯಾಲಯಗಳಲ್ಲಿ ದಾಖಲಾಗಿರುವ ಪ್ರಕರಣಗಳಿಗೆ ಕಂಡಿಕೆವಾರು ಆಕ್ಷೇಪಣೆ ಗಳನ್ನು ಸಲ್ಲಿಸಿ ಪ್ರಕರಣ ಇತ್ಯರ್ಥಕ್ಕೆ ಕ್ರಮ ಕೈಗೊಳ್ಳಲಾಗಿದೆ. |

<table>
<tr>
<td>ಇ)</td>
<td>ನಾಲ್ಕು ವರ್ಷಗಳ ಹಿಂದೆ ರಾಜ್ಯದ ಎಲ್ಲಾ ದೇವಾಲಯಗಳ ಆಸ್ತಿ ಸರ್ವೆಗೆ ಸರ್ಕಾರ ಆದೇಶಿಸಿದ್ದು, ಸದರಿ ಸರ್ವೆ ಕಾರ್ಯ ಈಗಾಗಲೇ ಪೂರ್ಣಗೊಂಡಿದೆಯೇ;</td>
<td>ರಾಜ್ಯದ ಧಾರ್ಮಿಕ ದತ್ತಿ ಇಲಾಖೆಯ ಎಲ್ಲಾ ದೇವಾಲಯಗಳ ಆಸ್ತಿ ಸರ್ವೆಗೆ ಸರ್ವೆ ಕಾರ್ಯಗಳನ್ನು ಕೈಗೊಳ್ಳಲಾಗಿದೆ. ಕಳೆದ ನಾಲ್ಕು ವರ್ಷಗಳಿಂದ ಈ ತಹಲ್ ವರೆಗೆ ಈ ಕೆಳಕಂಡಂತೆ ಅಳತೆ ಕಾರ್ಯ ಪೂರ್ಣಗೊಂಡಿರುವ ಅಂಶವನ್ನು ಗಮನಕ್ಕೆ ತರಲಾಗಿದೆ.
<table>
<tr><th>ಪ್ರವರ್ಗ</th><th>ಅಳತೆ ಕಾರ್ಯ ಪೂರ್ಣಗೊಂಡ ಆಸ್ತಿಗಳ ಸಂಖ್ಯೆ</th></tr>
<tr><td>"ಎ"</td><td>478</td></tr>
<tr><td>"ಬಿ"</td><td>198</td></tr>
<tr><td>"ಸಿ"</td><td>6906</td></tr>
</table>
ಇನ್ನುಳಿದ ಆಸ್ತಿಗಳ ಸರ್ವೆ ಕಾರ್ಯ ಪ್ರಗತಿಯಲ್ಲಿದೆ.</td>
</tr>
<tr>
<td>ಈ)</td>
<td>ಪೂರ್ಣಗೊಂಡಿರದಿದ್ದಲ್ಲಿ, ಅದಕ್ಕೆ ಕಾರಣಗಳೇನು; ಯಾವ ಕಾಲಮಿತಿಯೊಳಗೆ ಸದರಿ ಸರ್ವೆ ಕಾರ್ಯವನ್ನು ಪೂರ್ಣಗೊಳಿಸಿ ಒತ್ತುವರಿ ಮತ್ತು ಅತಿಕ್ರಮಣವಾಗಿರುವ ದೇವಾಲಯದ ಆಸ್ತಿಗಳನ್ನು ಮರಳಿ ಪಡೆಲಾಗುವುದು ಹಾಗೂ ದೇವಾಲಯ ಆಸ್ತಿಗಳ ರಕ್ಷಣೆಗೆ ಶಾಶ್ವತ ಹಾಗೂ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಲಾಗುವುದು.</td>
<td>ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಗೆ ಒಳಪಡುವ ಅಧಿಸೂಚಿತ ದೇವಾಲಯ/ಸಂಸ್ಥೆಗಳ ಸ್ವತ್ತುಗಳನ್ನು ತ್ವರಿತವಾಗಿ ಅಳತೆ ಕಾರ್ಯ ಪೂರೈಸಲು ಈಗಾಗಲೇ ಪರಿಣಾಮಕಾರಿಯಾಗಿ ಕ್ರಮ ಕೈಗೊಳ್ಳಲಾಗಿದೆ. ಹಾಗಿದ್ದಾಗಿಯೂ ಸಹ ಸರ್ವೆ ಕಾರ್ಯ ಪೂರ್ಣಗೊಳ್ಳದಿರಲು ಕಾರಣಗಳು ಈ ಕೆಳಕಂಡಂತಿವೆ.<br>
1. ಮೂಲತ: ಶೇಕಡ 75 ರಷ್ಟು ಆಸ್ತಿಗಳು ದೇವಾಲಯದ ಹೆಸರಿನಲ್ಲಿ ಖಾತೆ ಹೊಂದಿರುವುದಿಲ್ಲ.<br>
2. ದೇವಾಲಯಗಳು ಬಹುತೇಕ ಜಮೀನುಗಳನ್ನು ಸರ್ಕಾರಿ ಜಮೀನಿನಲ್ಲಿ ಅನುಭವ ಹೊಂದಿದ್ದು, ಸುಪರ್ದಿಯನ್ನು ಹೊಂದಿದ್ದರೂ ಸಹ ಈವರೆಗೆ ದೇವಾಲಯದ ಹೆಸರಿಗೆ ಖಾತೆ ಮಾಡಿರುವುದಿಲ್ಲ.<br>
3. ಗ್ರಾಮಠಾಣ/ನಗರಸಭೆ/ಪಟ್ಟಣ ಪಂಚಾಯ್ತಿ/ ಪುರಸಭೆ ನಗರ ಪಾಲಿಕೆ ವ್ಯಾಪ್ತಿಯಲ್ಲಿ ದೇವಾಲಯದ ಆವರಣ ಮತ್ತು ಜಮೀನು ಇದ್ದು, ದೇವಾಲಯದ ಹೆಸರಿಗೆ ಖಾತೆ ಇರುವುದಿಲ್ಲ.<br>
4. ದೇವಾಲಯದ ಇನಾಂ ಜಮೀನುಗಳನ್ನು ಖಾಸಗಿಯವರಿಗೆ ಮಂಜೂರು ಮಾಡಿದ್ದು, ದೇವಾಲಯದ ಆವರಣವನ್ನು ಒಳಗೊಂಡಂತೆ ಮಂಜೂರು ಮಾಡಲಾಗಿದ್ದು, ದೇವಾಲಯಕ್ಕೆ ಖಾತೆ ಇರುವುದಿಲ್ಲ.</td>
</tr>
</table>

| | | |
|---|---|---|
| | | 5. ಅರಣ್ಯ ಪ್ರದೇಶಗಳಲ್ಲಿ ದೇವಾಲಯಗಳು ಆವರಣಗಳನ್ನು ಹೊಂದಿದ್ದು, ಖಾತೆ ಇರುವುದಿಲ್ಲ.<br>6. ಸರ್ಕಾರಿ ಜಮೀನುಗಳಲ್ಲಿ ದೇವಾಲಯದ ಹೆಸರಿಗೆ ಖಾತೆ ಇದ್ದರೂ ಪ್ರತ್ಯೇಕ ನಂಬರಾಗಿ ದುರಸ್ತಾಗಿರುವುದಿಲ್ಲ.<br>7. ಕೆಲವೊಂದು ಪಹಣಿಗಳಲ್ಲಿ ಸರ್ಕಾರಿ ಬೀಳು ಅಥವಾ ಸರ್ಕಾರಿ ಖರಾಬು/ಗೋಮಾಳ/ ಅಥವಾ ಖಾಸಗಿ ವ್ಯಕ್ತಿಯೊಂದಿಗೆ ದೇವಾಲಯದ ಹೆಸರು ಜಂಟಿ ಖಾತೆಯಲ್ಲಿ ದಾಖಲಿದ್ದು, ದೇವಾಲಯಕ್ಕೆ ಪ್ರತ್ಯೇಕ ವಿಸ್ತೀರ್ಣ ದಾಖಲಿಸಿರುವುದಿಲ್ಲ.<br>8. ದಕ್ಷಿಣ ಕನ್ನಡ ಜಿಲ್ಲೆಯ ಬಹುತೇಕ ದೇವಾಲಯಗಳ ಪಹಣಿಯಲ್ಲಿ ಮೂಲಗೇಣಿದಾರರ ಹೆಸರನ್ನು ಪಹಣಿಯ 11ನೇ ಕಾಲಂನಲ್ಲಿ ದಾಖಲಿಸುವ ಬದಲು ಕಾಲಂ ನಂ-9ರಲ್ಲಿ ದೇವಾಲಯದ ಹೆಸರಿನೊಂದಿಗೆ ಜಂಟಿಯಾಗಿ ದಾಖಲಿಸಿರುತ್ತಾರೆ.<br>9. ದೇವಾಲಯಗಳ ಜಮೀನುಗಳಲ್ಲಿ ಆಗಿರುವ ಭೂ ಸ್ವಾಧೀನಗಳನ್ನು ಪಹಣಿಯಲ್ಲಿ ಇಂದೀಕರಿಸಿರುವುದಿಲ್ಲ ಹಾಗೂ ಪರಿಹಾರವನ್ನು ಸಹ ನೀಡಿರುವುದಿಲ್ಲ.<br>10. ಆಕಾರ ಬಂದು ವಿಸ್ತೀರ್ಣಕ್ಕೆ ಮತ್ತು ಪಹಣಿ ವಿಸ್ತೀರ್ಣಕ್ಕೆ ತಾಳೆ ಇರುವುದಿಲ್ಲ.<br>11. ಸರ್ವೆ ಇಲಾಖೆಯಲ್ಲಿ ಅಳತೆಗೆ ಅರ್ಜಿ ಸಲ್ಲಿಸಲು ಮಾಲೀಕತ್ವದ ದಾಖಲೆಗಳ ಅವಶ್ಯಕತೆ ಇದೆ ಹಾಗೂ ರೆವಿನ್ಯೂ ದಾಖಲೆಗಳಲ್ಲಿ ತೊಡಕಿರುವ ಪ್ರಕರಣಗಳನ್ನು ಅಳತೆ ಮಾಡಲಾಗುವುದಿಲ್ಲ. ಕಾರಣ ಈ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಿಕೊಂಡು ಅಳತೆ ಬಗ್ಗೆ ಕ್ರಮ ಕೈಗೊಳ್ಳಲಾಗುವುದು. |

| | | |
|---|---|---|
| | | ಅಧಿಸೂಚಿತ ಮುಜರಾಯಿ ದೇವಾಲಯಗಳ ಸ್ಥಿರಾಸ್ತಿಗಳ ಪೈಕಿ ಶೇಕಡ 75 ರಷ್ಟು ಆಸ್ತಿಗಳು ದೇವಾಲಯದ ಹೆಸರಿಗೆ ಖಾತೆಯಾಗಿರುವುದಿಲ್ಲ. ಶೇಕಡ 25 ರಷ್ಟು ಖಾತೆ ಇರುವ ಪೈಕಿ ಶೇಕಡ 15 ರಷ್ಟು ಕಂದಾಯ ದಾಖಲೆಗಳಲ್ಲಿ ನ್ಯೂನ್ಯತೆ ಇರುತ್ತದೆ. ಅವುಗಳನ್ನು ಸರಿಪಡಿಸಲು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿರುತ್ತದೆ. |

ಸಂಖ್ಯೆ: ಕಂಇ 106 ಮುಸಪು 2023

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು.